# 58 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ
# ಸಿಸಿಹೆಚ್-59
# ಎಸ್.ಸಿ.ನಂ. 1319/2024

ಪಿ.ಡಬ್ಲ್ಯೂ. 16
ಸಿ.ಡಬ್ಲ್ಯೂ. 143
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 23.06.2026

| | |
|---|---|
| **ಸಾಕ್ಷಿಯ ಹೆಸರು** | ಮಂಜುನಾಥ.ಆರ್ |
| **ತಂದೆಯ ಹೆಸರು** | ಲೇಃ ರಾಜಣ್ಣ |
| **ವಯಸ್ಸು** | 44 ವರ್ಷ |
| **ವೃತ್ತಿ** | ಚಿಕನ್ ವ್ಯಾಪಾರ |
| **ವಾಸ ಸ್ಥಳ** | ಊರಕೆರೆ ಗ್ರಾಮ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ. |

**ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ಪಿಪಿ ರವರಿಂದಃ**

ನಾನು ಈಗ ಯಾವ ಕೇಸಿನಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದು ನನಗೆ ತಿಳಿದಿರುತ್ತದೆ. ದಿಃ12.07.2024 ರಂದು ತುಮಕೂರು ತಾಲ್ಲೂಕಿನ ದುರ್ಗಾ ಬಾರ್ ಪಕ್ಕದಲ್ಲಿ ಒಂದು ಚಿಕ್ಕ ಟೀ ಹೋಟೆಲ್ ಇದ್ದು, ಅಲ್ಲಿ ನಾನು ಮತ್ತು ನನ್ನ ಸ್ನೇಹಿತರು ಬೆಳಗ್ಗೆ 11.00 ಗಂಟೆ ಸುಮಾರಿಗೆ ಟೀ ಕುಡಿಯುತ್ತಿದ್ದೆವು. ಆಗ ಕಾಮಾಕ್ಷಿಪಾಳ್ಯದ ಪಿಎಸ್ಐರವರು ಅಲ್ಲಿಗೆ ಬಂದು ನಿಂತುಕೊಂಡು, ಸದರಿ ಟೀ ಹೋಟೆಲ್ ಬಳಿ ಇದ್ದವರನ್ನು ಕರೆದರು, ಆದರೆ ಯಾರು ಹೋಗಲಿಲ್ಲ, ಆಗ ನಾನು ಮತ್ತು ನನ್ನ ಸ್ನೇಹಿತ ಶ್ರೀನಿವಾಸ(ಚಾ.ಸಾ.48) ಮಾತ್ರ ಅವರ ಬಳಿ ಹೋದೆವು.

2. ಆಗ ಅವರು ನಮಗೆ ಒಂದು ಕೊಲೆ ಕೇಸಿನಲ್ಲಿ ಸಿಸಿ ಟಿವಿ ಫೂಟೇಜ್ ಗಳನ್ನು ದುರ್ಗಾ ಬಾರಿನಿಂದ ತೆಗೆದುಕೊಳ್ಳಬೇಕು ಅದಕ್ಕೆ ನಿಮ್ಮ ಸಹಾಯ ಬೇಕು ಎಂದು ಕೇಳಿಕೊಂಡರು. ಅದಕ್ಕೆ ನಾವು ಯಾರ ಕೇಸು ಎಂದು ಕೇಳಿದೆವು. ನಂತರ ಪೊಲೀಸರು ನನ್ನ ಮತ್ತು ಚಾ.ಸಾ.48 ರವರ ಹೆಸರು ಮತ್ತು ವಿಳಾಸ ಬರೆದುಕೊಂಡು

ನಮಗೆ ಒಂದು ಲೆಟರ್ ನ್ನು ನೀಡಿರುತ್ತಾರೆ. ಅದಕ್ಕೆ ನಾವು ಸಹಿ ಮಾಡಿರುತ್ತೇವೆ. ಸಹಿ ಮಾಡಿದ ಸದರಿ ಲೆಟರ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ 12.07.2024 ರಂದು ನೀಡಿದ ಪಂಚನಾಮೆ ನೋಟೀಸ್ ನ್ನು ತೋರಿಸಿದಾಗ ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನೋಟೀಸ್ ನ್ನು ಈಗ **ನಿ.ಪಿ.109** ಮತ್ತು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.109(ಎ)** ಎಂದು ಗುರುತಿಸಲಾಯಿತು.

3. ಪೊಲೀಸರು ನಮಗೆ ರೇಣುಕಾಸ್ವಾಮಿ ಕೊಲೆ ಕೇಸಿಗೆ ಸಂಬಂದಿಸಿದಂತೆ ಮಹಜರ್ ಗಾಗಿ ಬಂದ್ದಿರುವುದಾಗಿ ತಿಳಿಸಿದರು. ನಂತರ ಪೊಲೀಸರು ನಮ್ಮನ್ನು ದುರ್ಗಾ ಬಾರ್ ಒಳಗೆ ಕರೆದುಕೊಂಡು ಹೋದರು. ಅಲ್ಲಿ ನಮಗೆ ಬಾರ್ ಕ್ಯಾಶಿಯರ್ ಸಂದೀಪ್(ಚಾ.ಸಾ.49) ಸಿಕ್ಕರು. ಆಗ ಪೊಲೀಸರು ಸದರಿ ಚಾ.ಸಾ.49 ರವರಿಗೆ ನಾವು ನಿಮಗೆ ಸಿಸಿ ಟಿವಿ ಫೂಟೇಜ್‌ಗಳನ್ನು ನೀಡಲು ತಿಳಿದ್ದು, ಆದರೆ ನೀವು ಇನ್ನುವರೆಗೆ ನೀಡಿಲ್ಲ ಎಂದು ಹೇಳಿದರು. ಆಗ ಸದರಿ ಸಂದೀಪ್‌ರವರು ನಾವು ಪೆನ್ ಡ್ರೈವ್ ನ್ನು ರೆಡಿ ಮಾಡಿ ಇಟ್ಟುಕೊಂಡಿದ್ದೆವು, ಆದರೆ ನೀವೇ ಬರಲಿಲ್ಲ ಎಂದು ಹೇಳಿದರು.

4. ಆಗ ಪೊಲೀಸರು ಸದರಿ ಪೆನ್ ಡ್ರೈವ್‌ನ್ನು ಸಂದೀಪ್‌ರವರಿಂದ ಪಡೆದುಕೊಂಡು ಲ್ಯಾಪ್ ಟಾಪ್‌ಗೆ ಕನೆಕ್ಟ ಮಾಡಿಕೊಂಡರು. ಸದರಿ ಸಿಸಿ ಟಿವಿ ಫ್ಯೂಟೇಜ್‌ನ್ನು ಬೆಳಗ್ಗೆ 11.16 ರಿಂದ ಪಡೆದುಕೊಂಡಿದ್ದರು ಹಾಗೂ ಸದರಿ ಫೂಟೇಜ್ 15 ನಿಮಿಷಗಳ ಕಾಲ ಸ್ಲೋ ಇದೆ ಎಂದು ಹೇಳಿದರು. ಸದರಿ ಫೂಟೇಜ್‌ನಲ್ಲಿ ಜಗದೀಶ್, ಅನು, ರಾಘವೇಂದ್ರ ಮತ್ತು ರೇಣುಕಾಸ್ವಾಮಿ ಎಂಟ್ರಿ ಆಗುತ್ತಿರುವುದನ್ನು ನಮಗೆ ತೋರಿಸಿದರು. ಆ ಫೂಟೇಜ್‌ನಲ್ಲಿ ಇರುವ ಎರಡು ಫೋಟೋಗಳ

screenshot ಗಳನ್ನು ತೆಗೆದುಕೊಂಡಿರುತ್ತಾರೆ. ಆ ಫೂಟೇಜ್‌ಗಳಲ್ಲಿ ಎಂಟ್ರಿ ಮತ್ತು ಎಕ್ಸಿಟ್ ಫೂಟೇಜ್‌ಗಳ screenshot ತೆಗೆದುಕೊಂಡಿರುತ್ತಾರೆ. ನಂತರ ಪೆನ್ ಡ್ರೈವ್ ನ್ನು ಒಂದು ಎನ್ವಲಪ್‌ಗೆ ಹಾಕಿ ಕ್ಲೋಸ್ ಮಾಡಿರುತ್ತಾರೆ.

5. ಸದರಿ ಫೂಟೇಜ್‌ನಲ್ಲಿ ರೇಣುಕಾಸ್ವಾಮಿಯನ್ನು ಕರೆದುಕೊಂಡು ಬಂದಿರುವುದು, ಅಲ್ಲಿ ಮಧ್ಯವನ್ನು ತೆಗೆದುಕೊಂಡು ಫೋನ್ ಪೇ ನಲ್ಲಿ ಹಣ ಸಂದಾಯ ಮಾಡಿರುವುದು ಹಾಗೂ ಅಲ್ಲಿಂದ ರೇಣುಕಾಸ್ವಾಮಿಯನ್ನು ಕರೆದುಕೊಂಡು ಹೋಗಿರುವುದು ಕಂಡುಬಂತು. ಸದರಿ ಫೂಟೇಜ್ ದಿಃ08.06.2024 ರದ್ದು ಆಗಿತ್ತು. ಪೊಲೀಸರು ಎರಡು ಫೂಟೇಜ್ ಗಳನ್ನು ಅಂದರೆ ಒಂದು ಫೂಟೇಜ್ 10 ನಿಮಿಷಗಳದ್ದು ಮತ್ತು ಇನ್ನೊಂದು ಫೂಟೇಜ್ 9 ನಿಮಿಷಗಳದ್ದಾಗಿತ್ತು.

6. ಆ ವಿಡಿಯೋದಲ್ಲಿ ನೋಡಿದ ವ್ಯಕ್ತಿಗಳನ್ನು ನಾನು ಈ ದಿನ ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ.

7. At this stage, Ld. Sr. Counsel for A2 and Ld. Counsel for A3,4, 6 to 9, 13 & 15 to 17 objected for identification of the persons seen in the footages, I.e Jagadeesh, Anu, Raghavendra and Renukaswamy in the open court and also submits that the said persons may be shown in the CC TV footages.

8. Ld. Spl. PP and he is permitted to show the CC TV footages to the witness and thereafter, identification the

accused shall be decided. Ld. Spl. PP submits this pen drive is annexed with the certificate U/Sec. 65B of the evidence Act and it is the part of records and also submits that it is directly given to the court and the copy of the said pen drive is not furnished to the defence counsels and even he is not having the copy).

9. IO is directed to furnish the copy of pen drive to the prosecution and defence counsels.

10. ಪೆನ್ ಡ್ರೈವ್‌ನ್ನು ಕವರ್ ನಲ್ಲಿ ಹಾಕಿದ ನಂತರ ಪೊಲೀಸರು ಅದನ್ನು K ಎಂಬ ಸೀಲಿನಿಂದ ಸೀಲ್ ಮಾಡಿ ಚೀಟಿ ಅಂಟಿಸಿ ಅದಕ್ಕೆ ನನ್ನ ಮತ್ತು ಶ್ರೀನಿವಾಸ್ ಮತ್ತು ಸಂದೀಪ್‌ರವರ ಸಹಿಗಳನ್ನು ಪಡೆದುಕೊಂಡು ಪೊಲೀಸರು ಸಹ ಅದಕ್ಕೆ ಸಹಿ ಮಾಡಿರುತ್ತಾರೆ. ಅದೇ ಸಮಯದಲ್ಲಿ ಒಬ್ಬ ಪೊಲೀಸ್ ಸಿಬ್ಬಂದಿ ಬರವಣಿಗೆ ಮಾಡಿದ್ದರು ಮತ್ತು ಒಂದು ಫೋಟೋಗಳನ್ನು ಸಹ ತೆಗೆದಿದ್ದರು.

11. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.28/2020 ರಲ್ಲಿನ ಸೀಲಿನಿಂದ ಕೂಡಿದ ಕವರ್ ನಲ್ಲಿ ಒಂದು ವಸ್ತುವನ್ನು ಹಾಜರುಪಡಿಸಿದ್ದು, ಅದನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿ ಅದರ ಮೇಲೆ ಇರುವ ತನ್ನ ಮತ್ತು ತಮ್ಮ ಸ್ನೇಹಿತ ಶ್ರೀನಿವಾಸ ಮತ್ತು ಸಂದೀಪ್‌ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಕವರ್ ನ್ನು ಈಗ **ನಿ.ಪಿ.110** ಮತ್ತು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.110(ಎ)** ಎಂದು ಗುರುತಿಸಲಾಯಿತು.

12. ಸದರಿ ಸೀಲ್ಡ ಕವರ್ ನ್ನು ತೆರೆದ ನ್ಯಾಯಾಲಯದಲ್ಲಿ ಮಾನ್ಯ ಆರೋಪಿಗಳ ಪರ ಹಾಗೂ ಮಾನ್ಯ ವಿಶೇಷ ಪಿಪಿರವರ ಸಮಕ್ಷಮ ತೆಗೆಯಲಾಯಿತು. ಅದರಲ್ಲಿ ಪೆನ್ ಡ್ರೈವ್ ಇರುವುದು ಕಂಡುಬಂತು. ಸಾಕ್ಷಿಗೆ ಈಗ ಸದರಿ ಪೆನ್ ಡ್ರೈವ್ ನ್ನು ತೋರಿಸಿದಾಗ ಇದೇ ಪೆನ್ ಡ್ರೈವ್ ಎಂದು ಗುರುತಿಸಲು ಆಗುವುದಿಲ್ಲ, ಆದರೆ ಒಂದು ಪೆನ್ ಡ್ರೈವ್‌ನ್ನು ಪೊಲೀಸರಿಗೆ ಸಂದೀಪ್‌ರವರು ನೀಡಿದ್ದರು ಎಂದು ನುಡಿಯುತ್ತಾರೆ.

13. ಸದರಿ ಪೆನ್ ಡ್ರೈವ್ ಗೆ ಸಂಬಂದಿಸಿದ 65B Certificate ನ್ನು ಮಾನ್ಯ ವಿಶೇಷ ಪಿಪಿರವರು ದೋಷಾರೋಪಣಪಟ್ಟಿಯ ಪುಟ ಸಂ.935 ಇರುತ್ತದೆ ಎಂದು ತೋರಿಸುತ್ತಾರೆ. ಸದರಿ ಸರ್ಟಿಫಿಕೇಟ್‌ನ್ನು ಪರಿಶೀಲಸಲಾಯಿತು. ಸದರಿ ಪರಿಶೀಲಸಲಾಗಿ ಅದು ಇದೇ ಪೆನ್ ಡ್ರೈವ್ ಗೆ ಸಂಬದಿಸಿದ್ದರಿಂದ, ಸದರಿ ಪೆನ್ ಡ್ರೈವ್ ನ್ನು ನಿ.ಪಿ.111 ಎಂದು ಗುರುತಿಸಲಾಯಿತು.(Certificate U/sec. 65B is enclosed.)

**(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದ ಕಾರಣ, ಮುಂದುವರೆದ ಮುಖ್ಯ ವಿಚಾರಣೆ ನಾಳೆಗೆ ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ದಿನಾಂಕಃ 24.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿಪಿ ರವರಿಂದಃ</u>**

14. ನೆನ್ನೆ ನನ್ನ ಮುಖ್ಯ ವಿಚಾರಣೆಯ ಪ್ಯಾರ ನಂ.5 ರಲ್ಲಿ ಹೇಳಿದಂತೆ, ಸಿಸಿ ಟಿವಿ ಫೂಟೇಜ್‌ಗಳನ್ನು ಮತ್ತೆ ಪ್ಲೇ ಮಾಡಿ ನೋಡಿದರೆ ಗುರುತಿಸುತ್ತೇನೆ. The pen drive which is marked as Ex.P111 is first run in the open court system and it is found in working condition. Later in order to record evidence in the system, pen drive is played in the IO laptop using write blocker and further evidence is recorded.

15. Now the 1st clip is played and shown to the witness. The video clipping bearing the date as 08.06.2024 and time starts from 11:20:02 a.m and ends at 11:30:06a.m., The entry of the few persons is shown at 11:22:17 a.m. The witness has identified the videos and persons found in the videos as he has seen the same video on the day of drawing Mahazar.

16. The 2nd clip is now played, it starts from 11:20:02a.m, and ends at 11:30:05a.m. In this clipping, at 11:22:02a.m onwards the few persons are coming inside

the Bar.

**Q:** In the yesterday's evidence you have stated that the police have shown the persons by name Jagadessh, Anu, Raghavendra and Renukaswamy entering the bar in the CC TV footages on the day of drawing mahazar. Now can you identify those persons in the video clippings?

17. At this stage, Ld. Sr. Counsel for A2 objected for recording the answer of the witness on the ground that this witness is only a panch witness of drawing of seizure of pen drive, he cannot depose the contents of the pen drive and he is not an eye witness to the said clippings and the names stated by the police to him is in admissible in evidence. Therefore he cannot depose with regard to identity of the person, if he is depose it will amounts to hearsay.

18. Sri. RR Ld. Counsel for accused adopted the same objections and objected for the recording answers on the said question.

19. Ld. Spl. PP submitted that on the day of

drawing mahazar pen drive contents were played in his presence and in the mahazar the names of four persons already entered in the said mahazar and this witness has already deposed about the names of the said four persons in his evidence. The nature and veracity of this witness as hearsay as to be decided at the time of appreciation of evidence and witness is expected to say what ever he knows about the facts of the case.

20. Ld. Sr. Counsel Sri. HP for A2 submitted that this witness is not eye witness and he cannot depose about the contents of the pen drive and also identity of the persons found in the footages. In the chief itself the witness has deposed that police have said the names of the persons. Only the evidence which admissible in the evidence is to be recorded. Therefore the evidence stated by the witness is inadmissible and it cannot be allowed to elaborate.

21. Heard and perused the records.

22. The prosecution has examined Mr. Manjunath. R as PW16 and during the course of his evidence he has deposed about the drawing of mahazar and seizing of one pen drive stating to be contain the video clipping of entry and exit of persons by name Jadeesha, Anu, Raghavendra & Renukaswamy.

23. During the course of his evidence, the witness has identified the pen drive which is marked Ex.P111. HE has also deposed the procedure adopted on the day relating to seizing of pen drive by drawing of mahazar. The witness has specifically deposed that on the day of drawing mahazar, CC TV Footages, dtd. 08.06.2024 were played in the laptop in Durga Bar and they have shown the entry said four persosn, ie. Jadeesha, Anu, Raghavendra & Renukaswamy in the bar. Further witness also stated that, he can identify the said CC TV footages if played and shown to him.

24. In continuation of said evidence the prosecution intends to say about the contents of the pen drive in particular about the said four persons, Jadeesha, Anu, Raghavendra &

Renukaswamy shown to him by the police on the day of drawing mahazar.

25. This is objected by the Ld. Designated Sr. Counsel for A2 and other Ld. Counsels for other accused on the ground that this witness is only a panch witness of drawing of seizure of pen drive, he cannot depose the contents of the pen drive and he is not an eye witness to the said clippings and the names stated by the police to him is in admissible in evidence. Therefore he cannot depose with regard to identity of the person, if he is depose it will amounts to hearsay.

26. Ld. Spl. PP submitted that on the day of drawing mahazar pen drive contents were played in his presence and in the mahazar the names of four persons already entered in the said mahazar and this witness has already deposed about the names of the said four persons in his evidence. The nature and velocity of this witness as hearsay as to be decided at the time of appreciation of evidence and witness is expected to say what ever he

knows about the facts of the case and hence prayed to allow the witness to speak about the contents of the pen drive.

27. In this regard I would rely upon the decision of the Honb'le Apex court reporting in 2025 SCC Online, Pg. 1117 held in between Kailash Vs State of Maharashtra.

In the said decision it is held as follows;

28. "*The learned Judge was required to play the CD at the time of recording evidence of each witness and record the contents appearing on the screen with the help of the concerned witness. If this procedure had been followed, then the contents of the CD would have become legally admissible evidence. This procedure had not been followed. This has caused prejudice to the appellants as well as to the prosecution. The important evidence collected in the form of the video recording has not been converted into legally admissible evidence………*

*29. If the evidence of the witnesses had been recorded on playing the video recording at the time of the evidence, then the oral testimony of the witnesses on oath, as to the contents of the CD would have been part of the record….*

*30. It was necessary to show this part of the recording to the witnesses and record the description of the substance in detail through each and every witness. In my view, this is a fundamental flaw in this*

*case..... It was the responsibility of the learned prosecutor to insist before the learned Judge to play the CD when the witnesses were in the witness box. It was not done by the learned Prosecutor/In-charge of the case……*

*31. In this case, the required evidence as to the contents of the video recording or CD has not been properly recorded. There is a procedural error. It was the duty of the Court to give justice to the hard work put in by the police officer, while conducting the raid and ensuring the video recording of the entire proceedings. The video recording is the most important and vital evidence in this case. It can reflect upon the credibility and authenticity of the raid. Similarly, the description of the substance, which can be seen from the video recording, would be of immense importance. It cannot be excluded from consideration, if it is proved properly."*

32. This decision is rightly applicable to the present case. The prosecution intends to get the statement of witness as evidence from the witness-PW16, who is in the witness box relating to the contents appearing on the screen on playing the pen drive. As per the principles laid down in the above decisions, the judge is required to play the CD/Pen drive while recording evidence of the witness(who is deposing about the said pen drive) and

record the contents appearing on the screen with the help of the concerned witness. If this procedure had been followed, then the contents of the pen drive would have become legally admissible evidence.

33. The Ld. Spl. PP rightly insisted the court to play the video when the witness is in witness box. Therefore, It is necessary to show the contents of the recording to the witness and record the description of the substance in detail through each and every witness who depose about the pen drive which is at Ex. P111.

34. The video found in the pen drive is required to be played while recording the statement/ deposition of witness, so as to enable the witness to explain the video in his own words in his deposition. Only if statement of witness is recorded as to the contents of the video, so as to understand the contents of the pen drive, then only the evidence of witness -PW16 and the contents of pen drive becomes admissible in evidence.

35. In view of the above discussion and decision, the Ld. Spl. PP is permitted to proceed with the evidence of PW16 and PW16 is permitted to explain the video clipping found in the pen drive and depose about it, in his own words.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**ದಿನಾಂಕಃ24.06.2026 ರಂದು ಮಧ್ಯಾಹ್ನ 3.20 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿಪಿ ರವರಿಂದಃ**

36. Video is played in the open court through the write block protector.

37. At this stage Ld. Counsel for A1 submitted that other than the Ld. Spl, PP anybody can act as the technical assistance to play the video in the lap top. As per the request of Ld. Counsel for A1, the video is played by the police official who are assisting the Spl. PP.

38. The Ld. Spl. PP submits that PSI who is present before the court is the witness to the case and cannot take assistance of said official and another police official doesn't know to operate the device. Ld. Counsel for A1 suggested the name of Adv. Sachin to operate the device. Permitted to operate.

39. **1st Clipping:-** ಸದರಿ ವಿಡಿಯೋದಲ್ಲಿ ದುರ್ಗಾ ಬಾರ್ ಎಂದು ಬರೆದಿರು ಬೋರ್ಡ ಕಾಣುತ್ತಿದೆ. ಅಲ್ಲಿ ಫ್ರಿಡ್ಜ್, ಕೌಂಟರ್ ಕಾಣುತ್ತಿದೆ. ಈಗ 11:21:51a.m ಗೆ ಜನ ಬಾರ್ ಒಳಗೆ ಬರುವುದು ಕಾಣುತ್ತಿದೆ. ಸಮಯ 11:22:20a.m ಗೆ ಜನ ಒಳಗೆ ಬರುವುದು ಕಾಣುತ್ತಿದೆ. ಸದರಿ ಸಮಯದಲ್ಲಿ ಅನು, ರಾಘವೇಂದ್ರ, ಜಗದೀಶ್ ಮತ್ತು ರೇಣುಕಾಸ್ವಾಮಿ ಬಾರ್ ಒಳಗೆ ಬರುತ್ತಿರುವುದು ಕಾಣುತ್ತಿದೆ. ಸಮಯ 11:22:50a.m ಗೆ ಅನು ಎಂಬುವವರು ಫೋನ್ ಹಿಡಿದುಕೊಂಡಿರುವುದು ಕಾಣುತ್ತಿದೆ. ಸಮಯ 11:2.:03a.m ಗೆ ಅನುರವರಿಂದ ರೇಣುಕಾಸ್ವಾಮಿ ಫೋನ್‌ನ್ನು ಪಡೆದುಕೊಂಡಿರುವುದು ಕಾಣುತ್ತಿದೆ. ಸಮಯ :11:23:30a.m ಗೆ ಸದರಿ ನಾಲ್ಕು ಜನ ಒಟ್ಟಿಗೆ ಇರುವುದು ಕಾಣುತ್ತಿದೆ. ಸಮಯ 11:23:51a.m.,ಗೆ ಮದ್ಯ ಖರೀದಿಸಿಲು ಕೌಂಟರ್ ಗೆ ಹೋಗಿರುತ್ತಾರೆ. ಸಮಯ 11:23:57a.m.,ಗೆ ಫೋನ್ ರೇಣುಕಾಸ್ವಾಮಿಯ ಕೈಯಲ್ಲಿ ಇದೆ. ಸಮಯ 11:24:07a.m.,ಗೆ ರೇಣುಕಾಸ್ವಾಮಿ ಫೋನ್ ಪೇನಲ್ಲಿ ಹಣ ಸಂದಾಯ ಮಾಡಲು ಹೋಗಿರುತ್ತಾರೆ. ಸಮಯ 11:25:01a.m.,ಗೆ ರೇಣುಕಾಸ್ವಾಮಿಯವರಿಂದ ರಾಘವೇಂದ್ರರವರು ಮೊಬೈಲ್‌ನ್ನು

ಪಡೆದುಕೊಂಡಿರುತ್ತಾರೆ. ಸಮಯ 11:25:27a.m.,ಗೆ ಅವರೆಲ್ಲರೂ ಒಟ್ಟಿಗೆ ಕೂಡವುದು ಕಾಣುತ್ತದೆ. ಸಮಯ 11:25:34a.m.,ಗೆ ಅವರೆಲ್ಲರೂ ಮಧ್ಯ ಬಾಟಲ್‌ನ್ನು ತೆಗೆದುಕೊಂಡು ಬಾರ್ ನಿಂದ ಹೊರಗೆ ಹೋಗುತ್ತಿರುವುದು ಕಾಣುತ್ತಿದೆ. ಸಮಯ 11:29:06a.m.,ಗೆ ಯಾರೋ ಒಬ್ಬ ವ್ಯಕ್ತಿ ½ ಪ್ಯಾಂಟ್ ಹಾಕಿಕೊಂಡು ಬಾರಿನ ಒಳಗೆ ಒಡಾಡುತ್ತಿದ್ದಾನೆ. ಸಮಯ 11:29:24a.m.,ಗೆ ಸಂದೀಪ್ ಕ್ಯಾಶಿಯರ್ ಕೌಂಟರ್ ನಿಂದ ಹೊರಗೆ ಬುರತ್ತಿದ್ದಾರೆ. ಸಮಯ 11:29:40a.m.,ಗೆ ಇನ್ನೊಬ್ಬ ಕ್ಯಾಶಿಯರ್ ಮಂಜುನಾಥರವರು ಸಹ ಕೌಂಟರ್ ನಿಂದ ಹೊರಗೆ ಬರುತ್ತಿದ್ದಾರೆ.

40. **2nd Clipping:-** ಸಮಯ 11:20:18a.m.,ಗೆ ಹೈವೇ ರೋಡ್ ಜ್ಯಾಮ್ ಆಗಿದೆ. ಸಮಯ 11:20:55a.m.,ಗೆ ಬಾರ್ ಮುಂದೆ ಬೈಕುಗಳು ನಿಂತಿವೆ. ಸಮಯ 11:21:23a.m.,ಗೆ ಬಾರ್ ನಿಂದ ಆಚೆ ಒಬ್ಬ ವ್ಯಕ್ತಿ ಹೋಗುತ್ತಿದ್ದಾರೆ. ಸಮಯ 11:21:42a.m.,ಗೆ ಒಬ್ಬ ವ್ಯಕ್ತಿ ಬೈಕನ್ನು ತೆಗೆದುಕೊಂಡು ಹೋಗುತ್ತಿದ್ದಾನೆ. ಸಮಯ 11:22:12a.m.,ಗೆ ಅನು, ಜಗದೀಶ್, ರೇಣುಕಾಸ್ವಾಮಿ ಮತ್ತು ರಾಘವೇಂದ್ರರವರು ಬಾರಿನ ಒಳಗೆ ಹೋಗುತ್ತಿದ್ದಾರೆ. ಸಮಯ 11:23:12a.m.,ಗೆ ಬಾರಿನಿಂದ ಒಬ್ಬ ವ್ಯಕ್ತಿ ಹೊರಗೆ ಹೋಗತ್ತಿದ್ದಾರೆ. ಸಮಯ 11:25:43a.m.,ಗೆ ಅನು, ಜಗದೀಶ್, ರೇಣುಕಾಸ್ವಾಮಿ ಮತ್ತು ರಾಘವೇಂದ್ರರವರು ಬಾರಿನ ಹೊರಗೆ ಹೋಗುತ್ತಿದ್ದಾರೆ.

41. At this stage, Ld. Counsel for A1 objected that there is some distortion in the video. Ld. Spl. PP submits, I have not seen the distortion and if it is found, the same

can be clarified at the time of examination of FSL officer.

42. ಸಮಯ 11:26:24a.m.,ಗೆ ಸಂದೀಪ್‌ರವರು ಬೈಕಿನಿಂದ ಇಳಿದು ಬಾರಿನ ಒಳಗೆ ಹೋಗಿರುತ್ತಾರೆ. ಸಮಯ 11:28:15a.m.,ಗೆ ಬಾರಿನಿಂದ ಹೊರಗೆ ಒಬ್ಬ ವ್ಯಕ್ತಿ ಹೋಗುತ್ತಿದ್ದಾನೆ. ಅದೇ ವ್ಯಕ್ತಿ ಸಮಯ 11:28:45a.m.,ಗೆ ಬಾರಿನ ಒಳಗೆ ಬರುತ್ತಿರುವುದು ಕಾಣುತ್ತಿದೆ. ಸದರಿ ವಿಡಿಯೋದ ಎಡಭಾಗದಲ್ಲಿ ಒಂದು ಹೋಟೆಲ್ ಅಂಗಡಿ ಇರುವುದು ಕಾಣುತ್ತಿದೆ.

43. ಈ ವಿಡಿಯೋ ಕ್ಲಿಪ್ಪಿಂಗ್‌ಗಳಲ್ಲಿ ನೀವು ಗುರುತಿಸಿದ ಅನು, ಜಗದೀಶ್, ಮತ್ತು ರಾಘವೇಂದ್ರರವರನ್ನು ಹಾಗೂ ರೇಣುಕಾಸ್ವಾಮಿಯವರ ಪೊಟೋವನ್ನು ನೋಡಿದರೆ ಗುರುತಿಸಲು ಆಗುತ್ತದೆಯೇ ಎಂದು ಕೇಳಿದಾಗ,----------- Ld. Sr. Counsel for A2 and other defence counsels objected that, the said persons have not been personally seen by this witness on the date of mahazar and objected for recording the answer to this question.

44. Heard and perused. This witness is deposing about the seizure of pen drive and the contents of the video shown to him on the day of drawing mahazar. Therefore, this witness cannot identify the persons who are present before the court or through VC as accused persons.

**ಪ್ರಶ್ನೆ:** ಸದರಿ ವಿಡಿಯೋದಲ್ಲಿ ಮೇಲೆ ಹೇಳಿದ ನಾಲ್ಕು ವ್ಯಕ್ತಿಗಳಲ್ಲಿ ಯಾರು ಯಾರು, ಯಾವ ವ್ಯಕ್ತಿಗಳು ಎಂದು ಅವರು ಹೆಸರು ಸಮೇತ ಗುರುತಿಸಲು ಆಗುವುದೆಯೇ?

**ಉತ್ತರ:** ಸಾಕ್ಷಿ ಸದರಿ ವಿಡಿಯೋವನ್ನು ಮತ್ತೊಮ್ಮೆ ಪ್ಲೇ ಮಾಡಿ ತೋರಿಸಿದಾಗ, ಅದನ್ನು ನೋಡಿ, ಸಿಮೆಂಟ್ ಕಲರ್ ಟೀ ಶರ್ಟನ್ನು ಧರಿಸಿ ಆಚೆ ಮುಖ ಮಾಡಿಕೊಂಡಿರುವರು ಅನು ಎಂದು ಗುರುತಿಸುತ್ತಾರೆ. ಅವರ ಪಕ್ಕದಲ್ಲಿ ಕಪ್ಪು ಬಣ್ಣದ ಟೀ ಶರ್ಟ ಧರಸಿದ ವ್ಯಕ್ತಿ ಜಗದೀಶ್, ಅವರ ಪಕ್ಕದಲ್ಲಿ ವೈಟ್ ಕಲರ್ ಶರ್ಟ ಧರಿಸಿರುವ ವ್ಯಕ್ತಿ ರೇಣುಕಾಸ್ವಾಮಿ, ನೀಲಿ ಬಣ್ಣದ ಶರ್ಟ ಧರಿಸಿರುವ ವ್ಯಕ್ತಿ ರಾಘವೇಂದ್ರ ಎಂದು ಗುರುತಿಸಿರುತ್ತಾರೆ.

45. 2 ನೇ ಕ್ಲಿಪ್ಪಿಂಗ್‌ನ ವಿಡಿಯೋವನ್ನು ಮತ್ತೊಮ್ಮೆ ಪ್ಲೇ ಮಾಡಿ ಸಾಕ್ಷಿಗೆ ತೋರಿಸಿ, ಅವರ ಹೆಸರು ಸಮೇತ ವ್ಯಕ್ತಿಗಳನ್ನು ಗುರುತಿಸಲು ಆಗುತ್ತದೆಯ ಎಂದು ಕೇಳಿದಾಗದ, ಸಾಕ್ಷಿ ಮೊದಲನೇ ವ್ಯಕ್ತಿ ಅನು 2 ನೇ ವ್ಯಕ್ತಿ ಜಗದೀಶ್, 3 ನೇ ವ್ಯಕ್ತಿ ರೇಣುಕಾಸ್ವಾಮಿ ಹಾಗೂ 4 ನೇ ವ್ಯಕ್ತಿ ರಾಘವೇಂದ್ರ ಎಂದು ಗುರುತಿಸಿರುತ್ತಾರೆ.

46. ದಿ:08.06.2024 ರಂದು ಪೊಲೀಸರು ಫೂಟೇಜ್‌ಗಳನ್ನು ತೆಗೆದುಕೊಂಡಿದ್ದನ್ನು ಮತ್ತು ಪ್ರಿಂಗ್ ತೆಗೆದಿದ್ದನ್ನು ನೋಡಿದರೆ ಗುರುತಿಸುತ್ತೇನೆ. ಪೆನ್ ಡ್ರೈವ್‌ನ್ನು ತೆಗೆದುಕೊಂಡ ನಂತರ ಪೊಲೀಸರು ಪಂಚನಾಮೆಯನ್ನು ಬರೆದುಕೊಂಡಿರುತ್ತಾರೆ ಹಾಗೂ ಅದನ್ನು ಅಲ್ಲಿಯೇ ಟೈಪ್ ಮಾಡಿ ಅಲ್ಲಿಯೇ ಪ್ರಿಂಟ್ ತೆಗೆದು ನಮಗೊಂದು ಕಾಪಿಯನ್ನು ಮತ್ತು ತಾವು ಒಂದು ಕಾಪಿ ಇಟ್ಟುಕೊಂಡು ಓದಲು ಕೊಟ್ಟಿರುತ್ತಾರೆ. ನಮಗೂ ಕೂಡ

ಅದನ್ನು ಓದಿ ಹೇಳಿರುತ್ತಾರೆ. ನಂತರ ಅದಕ್ಕೆ ನಮ್ಮ ಸಹಿ ಪಡೆದುಕೊಂಡು ಸಾಕ್ಷಿ ಹೇಳಲು ಬರಬೇಕು ಎಂದು ತಿಳಿಸಿರುತ್ತಾರೆ.

47. ಆ ದಿನ ಮಾಡಿದ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ದಿಃ08.06.2024 ರಂದು ಮಾಡಿದ ಮಹಜರ್ ನ್ನು ಸಾಕ್ಷಿ ತೋರಿಸಿದಾಗ, ಅದನ್ನು ಸಾಕ್ಷಿ ನೋಡಿ ಗುರುತಿಸಿ ಅದರಲ್ಲಿ ಇರುವ ತಮ್ಮ ಸಹಿಗಳನ್ನು ಸಹ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ **ನಿ.ಪಿ.112** ಮತ್ತು ಅದರ ಕೊನೆಯ ಪುಟದಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.112(ಎ)** ಎಂದು ಗುರುತಿಸಲಾಯಿತು.

48. ಸದರಿ ಪಂಚನಾಮೆ ಸಮಯದಲ್ಲಿ ಪೊಲೀಸರು ಬಾರಿನಲ್ಲಿ ಫೋಟೋವನ್ನು ತೆಗೆದುಕೊಂಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಮಾನ್ಯ ವಿಶೇಷ ಪಿಪಿರವರು ಸದರಿ ಫೋಟೋಗೆ ಸರ್ಟಿಫಿಕೇಟ್ ಹಾಜರುಪಡಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ಆರೋಪಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು **ನಿ.ಪಿ.113** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ 4.30 p.m.**

49. Ld. Designated Sr. Counsel Sri. HP for A2 submits if the prosecution is not examining the Bar Owner Mr. Sandeep(CW49), he will cross examine this witness now itself, otherwise he will cross examine PW16 after the examination of CW49.

50. Ld. Spl. PP submits, if the defence counsels are not disputing that Mr. Sandeep has not copied the pendrive, he will not examine Mr. Sandeep.

51. Ld. Counsel for A1 by relying upon the decision, of Crl.P.No. 16658/2025 in para No.13 and submitted that cross examination of PW16 must be deferred till the examination of all the set of witnesses.

52. Ld. Sri. Counsel for A2 submitted that, even now we are ready for cross examination of PW16 provided, the prosecution shall not lead evidence other related witnesses with regard to same subject matter and also submitted that, the prosecution has not followed the sequence of evidence and hence prosecution may be directed to follow the sequence of witnesses as per law and also relied upon decision of Hon'ble Apex court passed on 15.05.2026 in WP.(Criminal) No. 15/2026, wherein prosecution was permitted to examine 60 important witnesses and prosecution is not examining material

witnesses, if they examine material witnesses, they will not dispute examining the other witnesses.

53. Ld. Defence Counsel Sri. RR submitted that, commonality and subject matter related to the same witnesses has to be examined together and after the evidence of said witnesses, they will cross examine PW16. The order of recording of witnesses is mentioned in sec. 135 of Evidence Act and court has discretionary power to examine the witnesses as such, the court may direct the prosecution to examine the witnesses in the order decided by the court.

54. Ld Spl PP has submitted that, the Misc. application filed in Diary No. 36715/2026 filed (Filed on 13.06.2026) by the Accused No.2 before the Hon'ble Apex court stating about the trial of the case in the grounds in para No. 't', wherein the Accused No.2 has stated that, "Subsequent to passing of order dtd. 15.05.2026, the progress of the trial has remind substantially

unsatisfactory....Significantly both the witnesses are merely formal/ mahazar witnesses who evidence does not advance the substantive adjudication for the prosecution case”. Hence, Ld. SPP has submitted that, the Defence counsel has not disclosed the 15 days time spend during transfer of the case and they are examining the witnesses without any delay.

55. The Learned counsels for the Accused No.2 has submitted the review petition before the Hon’ble Apex Court alleging the the unsatisfactory progress in the trial by leading the formal witnesses.

56. As per the undertaking filed before the Hon’ble Apex court, the prosecution is examining the witnesses, which are according to them are material witness. But according to the defence, the PW16 is not a material or formal witness. Under such circumstances, why his cross examination has to be deferred for the reason of commonality or common subject matter witnesses?

**At 5.30p.m., Ld. Spl. PP & Ld. Counsels for accused persons requested for deferring the order for tomorrow. Hence, deferred.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,
ಬೆಂಗಳೂರು.**

**<u>ದಿನಾಂಕಃ29.06.2026 ರಂದು ಮಧ್ಯಹ್ನ 12.30 ಗಂಟೆಗೆ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಪಾಟಿಸವಾಲು 2 ನೇ ಆರೋಪಿ ಪರ ಪದಾಂಕಿತ ಹಿರಿಯ ಶ್ರೀ. ಹೆಚ್.ಪಿ ವಕೀಲರಿಂದಃ</u>**

57. ನಾನು ವಾಸವಾಗಿರುವ ಊರು, ದುರ್ಗಾ ಬಾರ್ ನಿಂದ 2 ಕೀ.ಮಿ ದೂರದಲ್ಲಿ ಇದೆ ಎಂದರೆ ಸರಿ. ನಾನು ಊರಕೆರೆ ಗ್ರಾಮದಲ್ಲಿಯೇ ಚಿಕನ್ ವ್ಯಾಪಾರ ಮಾಡುತ್ತೇನೆ. ನಾನು ಆ ದಿನ ಚಿಕನ್ ವ್ಯಾಪಾರ ಮಾಡಿರುತ್ತೇನೆ. ದುರ್ಗಾ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದ ಸಂದೀಪ್ ನನಗೆ ಪರಿಚಯ ಇಲ್ಲ. ಊರಕೆರೆಯಲ್ಲಿ ನಾನು ಚಿಕನ್ ವ್ಯಾಪಾರ ಮಾಡುತ್ತಿದ್ದ ಅಂಗಡಿಯ ಅಕ್ಕಪಕ್ಕದಲ್ಲಿ ಟೀ ಅಂಗಡಿ ಇರುವುದಿಲ್ಲ.

58. ಶ್ರೀನಿವಾಸ ನನಗೆ ಸುಮಾರು 10 ವರ್ಷಗಳಿಂದ ಪರಿಚಯ. ದುರ್ಗಾ ಬಾರ್ ಅಕ್ಕಪಕ್ಕದಲ್ಲಿ ಟೀ ಅಂಗಡಿ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.112

ಪಂಚನಾಮೆಯಲ್ಲಿ ಬರೆದಿರುವ ಚಕ್ಕುಬಂದಿಯಲ್ಲಿ ದುರ್ಗಾ ಬಾರ್ ಅಕ್ಕಪಕ್ಕದಲ್ಲಿ ಟೀ ಅಂಗಡಿ ಇದೆ ಎಂದು ಬರೆದಿರುವುದಿಲ್ಲ ಎಂದರೆ, ಸಾಕ್ಷಿ ಅದರಲ್ಲಿ ಬರೆದಿಲ್ಲ ಎನ್ನುತ್ತಾರೆ. ಸದರಿ ಪಂಚನಾಮೆಯಲ್ಲಿ ಆ ದಿನ ನಾನು ಟೀ ಅಂಗಡಿ ಹತ್ತಿರ ನಿಂತುಕೊಂಡಿದ್ದೆ ಎಂದು ಹೇಳಿ ಬರೆದಿರುವುದಿಲ್ಲ. ನನಗೆ ಮಧ್ಯಪಾನ ಮಾಡುವ ಚಟ ಇಲ್ಲ. ನಾನು ಎಂದೂ ದುರ್ಗಾ ಬಾರ್ ಗೆ ಈ ಮುಂಚೆ ಹೋಗಿರುವುದಿಲ್ಲ.

59. ದುರ್ಗಾ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದ ಸಿ.ಆರ್.ಮಂಜುನಾಥ ನನಗೆ ಪರಿಚಯ. ಸದರಿ ದುರ್ಗಾ ಬಾರ್ ನ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಮಂಜುನಾಥ @ಮಂಜಣ್ಣ ನನಗೆ ಮೂರು ವರ್ಷಗಳಿಂದ ಪರಿಚಯ.

60. ಪೊಲೀಸರು ಸದರಿ ದುರ್ಗಾ ಬಾರಿಗೆ ಬಂದಾಗ, ಸದರಿ ಮಂಜಣ್ಣ ಇರಲಿಲ್ಲ ಎಂದರೆ ಸರಿ. ಪೊಲೀಸರು ನಮಗೆ ಮಹಜರ್ ಗೆ ಕರೆಯುವ ಮುನ್ನ, ಈ ಮುಂಚೆ ದುರ್ಗಾ ಬಾರ್ ಒಳಗೆ ನಾನು ಹೋಗಿರುವುದಿಲ್ಲ. ಸದರಿ ದುರ್ಗಾ ಬಾರಿನಲ್ಲಿ ಸಿಸಿ ಟಿವಿ ಅಳವಡಿಸಿರುವುದಿಲ್ಲ ಎಂದರೆ, ಸಾಕ್ಷಿ ಪೊಲೀಸರು ತೋರಿಸಿದಾಗ ನೋಡಿರುತ್ತೇನೆ ಹಾಗೂ ಸಿಸಿ ಟಿವಿಗಳನ್ನು ಅಳವಡಿಸಿದ್ದನ್ನು ನೋಡಿರುವುದಿಲ್ಲ ಎನ್ನುತ್ತಾರೆ.

61. ಪೊಲೀಸರು ಈ ಹಿಂದೆ ದುರ್ಗಾ ಬಾರಿಗೆ ಬಂದು ಹೋಗಿರುವುದನ್ನು ನಾನು ವಿಚಾರಿಸಿರುವುದಿಲ್ಲ. ಆ ದಿನ ಪೊಲೀಸರು ನಿಮ್ಮನ್ನು ಜೊತೆಗೆ ಒಳಗೆ ಕರೆದುಕೊಂಡು ಹೋಗಿದ್ದರೇ ಅಥವಾ ಹೊರಗಡೆ ಕೂಡಿಸಿ ಸಂಪರ್ಕ ಹೊಂದಿದ್ದರೇ ಎಂದರೆ, ಸಾಕ್ಷಿ ಅವರೊಂದಿಗೆ ನಮ್ಮನ್ನು ಒಳಗಡೆ ಕರೆದುಕೊಂಡು ಹೋಗಿದ್ದರು

ಎನ್ನುತ್ತಾರೆ. ನೋಟೀಸ್ ನೀಡಿ ಒಳಗೆ ಕರೆದುಕೊಂಡು ಹೋಗುವ ಮೊದಲು ಪೊಲೀಸರು ನಮಗೆ ಸಿಸಿ ಟಿವಿ ದೃಶ್ಯಾವಳಿಗಳನ್ನು ಲ್ಯಾಪ್‌ಟಾಪ್‌ನಲ್ಲಿ ಪ್ಲೇ ಮಾಡಿ ತೋರಿಸಿರುವುದಿಲ್ಲ.

62. ಈ ಘಟನೆಗೆ ಸಂಬಂದಿಸಿದಂತೆ, ಈ ಪಂಚನಾಮೆಗೆ ಮೊದಲು ಈ ಘಟನೆಗೆ ಸಂಬಂದಿಸಿದಂತೆ ಯಾವುದೇ ವ್ಯಕ್ತಿಗಳು ನನಗೆ ಪರಿಚಯ ಇರಲಿಲ್ಲ ಎಂದರೆ ಸರಿ. ಪೆನ್‌ಡ್ರೈವ್‌ನ್ನು ಪೊಲೀಸರು ಪಡೆದುಕೊಳ್ಳುವ ಮೊದಲು ನಾನು ಅದನ್ನು ಕೈಯಲ್ಲಿ ಪಡೆದುಕೊಂಡು ನೋಡಿರುವುದಿಲ್ಲ. ಸದರಿ ಪೆನ್‌ಡ್ರೈವ್‌ನ್ನು ಯಾರು, ಹೇಗೆ, ಡೌನ್ ಲೋಡ್ ಮಾಡಿದ್ದರು ಎಂದು ನಾನು ವಿಚಾರಿಸಿರುವುದಿಲ್ಲ. ಪೆನ್‌ಡ್ರೈವ್‌ನ್ನು ಲ್ಯಾಪ್‌ಟಾಪ್ ಗೆ ಪ್ಲೇ ಮಾಡಿ ತೋರಿಸುವ ಮೊದಲು, ಆ ದೃಶ್ಯಾವಳಿಗಳಲ್ಲಿ ಕಂಡ ವ್ಯಕ್ತಿಗಳನ್ನು ನಾನು ಈ ಮೊದಲು ನೋಡಿರುವುದಿಲ್ಲ ಎಂದರೆ ಸರಿ.

63. ಅನು, ಜಗದೀಶ್, ರಾಘವೇಂದ್ರ ಮತ್ತು ರೇಣುಕಾಸ್ವಾಮಿ ಎಂಬ ಹೆಸರುಗಳನ್ನು ಪೊಲೀಸರು ನಮಗೆ ತಿಳಿಸಿದ್ದರು ಎಂದರೆ ಸರಿ. ಪೊಲೀಸರು ಈ ಹೆಸರುಗಳನ್ನು ಹೇಳುವ ಮೊದಲು ನಮಗೆ ಅವರು ಗೊತ್ತಿರಲಿಲ್ಲ ಎಂದರೆ ಸರಿ. ಅವರ ಹೆಸರುಗಳು ಮತ್ತು ಮಾಹಿತಿಗಳು ಈ ಮುನ್ನ ನನಗೆ ಸ್ವತಃ ಗೊತ್ತಿರಲಿಲ್ಲ ಎಂದರೆ ಸರಿ. ಈ ಹಿಂದೆ ಆ ವ್ಯಕ್ತಿಗಳು ನನಗೆ ಪರಿಚಯ ಇಲ್ಲದ ಕಾರಣ, ಪೊಲೀಸರು ನನಗೆ ಆ ದೃಶ್ಯಾವಳಿಗಳಲ್ಲಿ ಕಂಡಂತಹ ವ್ಯಕ್ತಿಗಳ ಹೆಸರುಗಳನ್ನು ನನಗೆ ಗುರುತಿಸಲು ಆಗುವುದಿಲ್ಲ ಎಂದರೆ ಸರಿ.

64. ಪೊಲೀಸರು ಪ್ಲೇ ಮಾಡಿ, ಇಂತಹ ಕಲರ್ ಬಟ್ಟೆಯನ್ನು ಧರಿಸಿರುವ

ವ್ಯಕ್ತಿ ಇಂತವರು ಎಂದು ನಮಗೆ ಹೇಳಿದ್ದರು. ಪೊಲೀಸರು ಆ ವ್ಯಕ್ತಿಗಳ ಹೆಸರು ಮತ್ತು ಐಡೆಂಟಿಟಿಯನ್ನು ತಿಳಿಸದೇ ಇದ್ದರೆ ನಮಗೆ ಅವರನ್ನು ಗುರುತಿಸಲು ಆಗುತ್ತಿರಲಿಲ್ಲ ಎಂದರೆ ಸರಿ. ಪೊಲೀಸರು ಹೇಳಿಕೆ ಆಧಾರದ ಮೇಲೆ ದೃಶ್ಯಾವಳಿಗಳನ್ನು ನೋಡಿಕೊಂಡು ನಾನು ಸಾಕ್ಷ್ಯವನ್ನು ನುಡಿದಿದ್ದೇನೆ ಎಂದರೆ ಸರಿ.

65. ಪೆನ್‌ಡ್ರೈವ್ ನೋಡಿದ ಮೇಲೆ ಪೆನ್‌ಡ್ರೈವ್‌ನಲ್ಲಿ ಇರುವ ದೃಶ್ಯಾವಳಿಗಳು ಯಾವಾಗ ಅದನ್ನು ಡೌನ್‌ಲೋಡ್ ಮಾಡಿರುತ್ತಾರೆ ಎಂದು ನಿಮಗೆ ಗೊತ್ತೆ ಎಂದರೆ, ಸಾಕ್ಷಿ ನಾವು ಹೋದಾಗ ಪೊಲೀಸರ ಕೈಗೆ ಕೊಟ್ಟಿದ್ದರಿಂದ, ನಮಗೆ ಅದು ಗೊತ್ತಿಲ್ಲ ಎನ್ನುತ್ತಾರೆ.

66. ನನಗೆ ಆ ದಿನ ದುರ್ಗಾ ಬಾರಿಗೆ ಕರೆಸಿರಲೇ ಇಲ್ಲ ಎಂದರೆ ಸರಿಯಲ್ಲ. ಆ ದಿನ ದುರ್ಗಾ ಬಾರಿಗೆ ಪಂಚನಾಮೆಗೆ ಬಂದಾಗ ವಿಡಿಯೋಗ್ರಾಫಿ ಮಾಡಿರುವುದಿಲ್ಲ. ನಾನು ಪಂಚನಾಮೆಗೆ ಸಹಿ ಮಾಡಿರುವ ಫೋಟೋ ತೆಗೆದಿರುವುದಿಲ್ಲ. ನಾನು ಪಂಚನಾಮೆಗೆ ಹೋದಾಗ ನಾನು ನೋಡಿದ್ದನ್ನು ಹೇಳಿ ಪಂಚನಾಮೆಯನ್ನು ಬರೆಸಿರುತ್ತೇನೆ.

**ಪ್ರಶ್ನೆಃ** ನಿಮಗೆ ತಿಳಿಯದೇ ಇರುವ ವಿಷಗಳು ಸಹ ಪಂಚನಾಮೆಯಲ್ಲಿ ಇದೆ ಎಂದರೆ?

**ಉತ್ತರಃ** ಹೌದು.

67. ನಮಗೆ ತಿಳಿಯದೆ ಇರುವ ವಿಷಯಗಳನ್ನು ಪೊಲೀಸರು ಬರೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಬೆರಳಚ್ಚು ಮಾಡುವ ಜ್ಞಾನ

ಇಲ್ಲ. ನನಗೆ ಕನ್ನಡ ಓದಲು ಬರುತ್ತದೆ, ಆದರೆ ಬರೆಯಲು ಬರುವುದಿಲ್ಲ. ಪಂಚನಾಮೆಯನ್ನು ಪೊಲೀಸರು, ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಬರೆದಿಟ್ಟಿದ್ದ, ನನ್ನನ್ನು ಅಲ್ಲಿಯೇ ಕರೆಸಿಕೊಂಡು, ನಿ.ಪಿ.112 ಕ್ಕೆ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

68. ದುರ್ಗಾ ಬಾರ್ ಅಕ್ಕಪಕ್ಕದಲ್ಲಿ ಬೇರೆ ಅಂಗಡಿಗಳು, ವಾಸದ ಮನೆಗಳು ಮತ್ತು ಮುಂದಕ್ಕೆ ಸಾರ್ವಜನಿಕರ ರಸ್ತೆ ಇದ್ದು, ಅದು ಜನಸಂದಣಿ ಇರುವ ಸ್ಥಳ ಎಂದರೆ ಸರಿ. ನಿ.ಪಿ.113 ಫೋಟೋವನ್ನು ಸದರಿ ಸ್ಥಳದಲ್ಲಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗೆ ನನ್ನ ಸಹಿ ಇಲ್ಲ ಎಂದರೆ ಸರಿ. ಸದರಿ ಫೋಟೋದ ಪ್ರಿಂಟ್‌ನ್ನು ಸ್ಥಳದಲ್ಲಿ ತೆಗೆದಿರುವುದಿಲ್ಲ ಎಂದರೆ ಸರಿ.

69. ನನ್ನನ್ನು, ಶ್ರೀನಿವಾಸ ಮತ್ತು ಸಂದೀಪ್‌ರವರನ್ನು ಪೊಲೀಸರು, ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಕರೆಸಿ, ಅಲ್ಲಿ ನಿ.ಪಿ.112 ಕ್ಕೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪೆನ್‌ಡ್ರೈವ್‌ನ್ನು ನಿಮಗೆ ಗುರುತು ಹಿಡಿಯಲು ಆಗುವುದಿಲ್ಲ ಎಂದರೆ, ಸಾಕ್ಷಿ ಅದು ನಮಗೆ ಗೊತ್ತಿಲ್ಲ ಎನ್ನುತ್ತಾರೆ. ಈ ದಿನ ಸಾಕ್ಷಿ ನುಡಿಯಲು ಬರುವ ಮುನ್ನ ಪದೇ ಪದೇ ವಿಡಿಯೋವನ್ನು ಪ್ಲೇ ಮಾಡಿ ತೋರಿಸಿ, ಪ್ರಕರಣದ ಕುರಿತು ಬಾಯಿಪಾಟ ಮಾಡಿಸಿ ಪೊಲೀಸರು ನನ್ನನ್ನು ಕರೆದುಕೊಂಡು ಬಂದು ಸಾಕ್ಷಿ ನುಡಿಸಿರುತ್ತಾರೆ ಎಂದರೆ ಸರಿಯಲ್ಲ.

70. ಅನು, ಜಗದೀಶ್, ರಾಘವೇಂದ್ರ ಮತ್ತು ರೇಣುಕಾಸ್ವಾಮಿ ಎಂಬ ಹೆಸರುಗಳನ್ನು ಪೊಲೀಸರು ನನಗೆ ಬಾಯಿಪಾಟ ಮಾಡಿಸಿ, ಮರೆಯಬಾರದು

ಎಂದು ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಅವರ ಹೆಸರುಗಳನ್ನು ಹೇಳಿದಾಗ, ನಾನು ಸದರಿ ಹೆಸರುಗಳನ್ನು ಬರೆದಿಟ್ಟುಕೊಂಡಿರುವುದಿಲ್ಲ. ಪೊಲೀಸರು ಆ ದಿನ ಕವರ್ ಗೆ ಸೀಲ್ ಮಾಡಿದ ಸೀಲನ್ನು ನನ್ನ ವಶಕ್ಕೆ ನೀಡಿರುವುದಿಲ್ಲ ಎಂದರೆ ಸರಿ.

71. ಆ ದಿನ ಪೊಲೀಸರು ಯಾವುದೇ ಪೆನ್ ಡ್ರೈವ್‌ನ್ನು ನನ್ನ ಸಮಕ್ಷಮ ಜಪ್ತಿ ಮಾಡಿಕೊಂಡಿರುವುದಿಲ್ಲ ಹಾಗೂ ಯಾವುದೇ ಕವರ್ ನಲ್ಲಿ ಹಾಕಿ ಸೀಲು ಮಾಡಿ ನಮ್ಮ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಎಷ್ಟು ಸಹಿಗಳನ್ನು ಮಾಡಿದ್ದೇನೆ ಎಂದು ಈಗ ನನಗೆ ನೆನಪಿಲ್ಲ. ಪೊಲೀಸರು ನಮ್ಮ ಹಲವಾರು ಸಹಿಗಳನ್ನು ಪಡೆದುಕೊಂಡು, ನನ್ನ ಸಾಕ್ಷ್ಯವನ್ನು ಈ ಪ್ರಕರಣದಲ್ಲಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ ಹಾಗೂ ನಾನು ಅದಕ್ಕೆ ಅನುವುಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

72. ಆ ದಿನ ನಮ್ಮನ್ನು ಪೊಲೀಸರು ಪಂಚನಾಮೆಗೆ ಕರೆಸಿದಾಗ, ಸಂದೀಪ್ ಪೊಲೀಸರಿಗೆ ಯಾವುದೇ ಪೆನ್ ಡ್ರೈವ್ ನೀಡಿರುವುದಿಲ್ಲ ಹಾಗೂ ಪೊಲೀಸರು ಸದರಿ ಪೆನ್ ಡ್ರೈವ್ ಜಪ್ತಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಸಂದೀಪ್, ನಮ್ಮ ಸಮಕ್ಷಮ, ಅವರು ನೋಟೀಸ್ ಕೊಟ್ಟ ಮೆರೆಗೆ ತಮ್ಮ ಬಾರ್ ಸಿಸಿ ಟಿವಿ ದೃಶ್ಯಾವಳಿಗಳನ್ನು, ಪೆನ್ ಡ್ರೈವ್‌ನಲ್ಲಿ ಡೌನ್ ಲೋಡ್ ಮಾಡಿ ಇಟ್ಟಿದ್ದೇನೆ ಎಂದು ಪೊಲೀಸರಿಗೆ ಹೇಳಿರಲಿಲ್ಲ ಮತ್ತು ಯಾವುದೇ ಪೆನ್ ಡ್ರೈವ್‌ನ್ನು ನಮ್ಮ ಸಮಕ್ಷಮ ಪೊಲೀಸರ ವಶಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀಸವಾಲು 4,6 ರಿಂದ 9,13 ಮತು 15 ರಿಂದ 17 ನೇ ಆರೋಪಿಗಳ ಪರ ಶ್ರೀ. ಆರ್.ಆರ್.ವಕೀಲರಿಂದಃ</u>**

ಶ್ರೀ. ಆರ್.ಆರ್. ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ

ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಪಾಟಿಸವಾಲು 5 ನೇ ಆರೋಪಿ ಪರ ಶ್ರೀ. ಕೆ.ಆರ್.ಎಸ್ ವಕೀಲರ ಪರವಾಗಿ ಶ್ರೀ. ಕೆಪಿಪಿ ವಕೀಲರಿಂದಃ**

ಶ್ರೀ. ಕೆಪಿಪಿ ವಕೀಲರು ಹಾಜರು ಇದ್ದು, ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಪಾಟಿಸವಾಲು 10 ನೇ ಆರೋಪಿ ಪರ ವಕೀಲರಿಂದಃ**

10 ನೇ ಆರೋಪಿ ಮತ್ತು ಅವರ ಪರ ಶ್ರೀ. ಎಸ್.ಎನ್. ವಕೀಲರು ಗೈರುಹಾಜರು ಇರುತ್ತಾರೆ. ಯಾವುದೇ ಸಕಾರಣ ಇಲ್ಲದ ಕಾರಣ, ಅವರ ಪರ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟಿಸವಾಲು 11 ನೇ ಆರೋಪಿ ಪರ ವಕೀಲರಿಂದಃ**

11 ನೇ ಆರೋಪಿ ವಿಸಿ ಮೂಲಕ ಹಾಜರು ಇದ್ದು, 2 ನೇ ಆರೋಪಿ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ ಹಾಗೂ ಮುಂದಿನ ದಿನಾಂಕದಂದು ಅವರ ಪರ ವಕೀಲರು ಹಾಜರು ಇರುತ್ತಾರೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ- 1.35 ಗಂಟೆಗೆ 1 ನೇ ಆರೋಪಿಯ ಪರ ವಕೀಲರು ಮಧ್ಯಾಹ್ನ 2.45 ಗಂಟೆಗೆ ತಮ್ಮ ಪಾಟಿಸವಾಲು ಮಾಡುವುದಾಗಿ ಹೇಳಿರುವುದರಿಂದ, ಮುಂದುವರೆದ ಪಾಟಿಸವಾಲನ್ನು ಮಧ್ಯಹ್ನನದ ಅವಧಿಗೆ ಮುಂದೂಡಲಾಯಿತು).**

**(3 ಮತ್ತು 14 ನೇ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಪಾಟಿಸವಾಲು ಮಾಡಿದ ನಂತರ, ತಾವು ಪಾಟಿಸವಾಲು ಮಾಡುವುದಾಗಿ ತಿಳಿಸಿರುತ್ತಾರೆ.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ದಿನಾಂಕಃ29.06.2026 ರಂದು ಸಾಕ್ಷಿಯನ್ನು ಮಧ್ಯಾಹ್ನ 4.05 ಗಂಟೆಗೆ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಪಾಟಿಸವಾಲು 1 ನೇ ಮತ್ತು 12 ನೇ ಆರೋಪಿಗಳ ಪರ ಶ್ರೀ. ಎಸ್.ಬಿ.ವಕೀಲರಿಂದಃ</u>**

73. 'ವಿಡಿಯೋ ತುಣುಕಗಳು' ಎಂದರೆ ಗೊತ್ತೆ ಎಂದರೆ, ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಮಹಜರ್ ನಲ್ಲಿ ಬರೆದ 'ವಿಡಿಯೋ ತುಣುಕುಗಳು' ಎಂಬುದರ ಬಗ್ಗೆ ಯಾರು, ಯಾತಕ್ಕೋಸ್ಕರ ಬರೆದಿದ್ದಾರೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಮಹಜರ್ ನ 3 ನೇ ಪುಟದ 5 ನೇ ಲೈನ್ ನಲ್ಲಿ 'ವಿಡಿಯೋ ತುಣುಕು' ಎಂದು ಬರೆದಿದ್ದು ಅದನ್ನು ಯಾರು, ಯಾತಕ್ಕೋಸ್ಕರ ಬರೆದಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದು ಕೇಳಿದಾಗ, ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

74. ಮಹಜರ್ ನ 4 ನೇ ಪುಟದ (Pg.No.929)ರಲ್ಲಿ 6 ನೇ ಲೈನ್ ನಲ್ಲಿ 'ವಿಡಿಯೋ ತುಣುಕು' ಮತ್ತು 8 ನೇ ಲೈನ್‌ನಲ್ಲಿ 'ವಿಡಿಯೋ ತುಣುಕಿನಲ್ಲಿ' ಎಂದು ಬರೆದ್ದು, ಅದನ್ನು ಯಾರು, ಯಾತಕ್ಕೋಸ್ಕರ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 'ತುಣುಕು' ಎಂದರೆ ನನಗೆ ಅರ್ಥವಾಗುತ್ತಿಲ್ಲ ಎನ್ನುತ್ತಾರೆ.

**ಪ್ರಶ್ನೆಃ** ಪೊಲೀಸರು ನಿಮಗೆ ತುಣುಕು ಮತ್ತು ತುಣುಕುಗಳ ಬಗ್ಗೆ ಮಾಹಿತಿ ನೀಡಿಲ್ಲ?

**ಉತ್ತರಃ** ನೀಡಿಲ್ಲ.

75. ನಾನು ಈ ತುಣುಕು ಮತ್ತು ತುಣುಕುಗಳ ಬಗ್ಗೆ ಪೊಲೀಸರನ್ನು ಕೇಳಿ ತಿಳಿದುಕೊಂಡಿಲ್ಲ ಎಂದರೆ ಸರಿ. ನಾನು ಮಹಜರ್ ನ್ನು ಓದಿ ನೋಡಿ ತಿಳಿದುಕೊಂಡು

ಸಹಿಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮಹಜರ್ ನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎನ್ನುತ್ತಾರೆ. ನಾನು ತುಣುಕು ಮತ್ತು ತುಣುಕುಗಳ ಬಗ್ಗೆ ತಿಳಿದುಕೊಳ್ಳದೇ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ, ಸಾಕ್ಷಿ ನನಗೆ ತುಣುಕು ಎಂದರೆ ಅರ್ಥವಾಗುತ್ತಿಲ್ಲ ಎನ್ನುತ್ತಾರೆ.

76. ನನ್ನ ಮುಖ್ಯವಿಚಾರಣೆಯ 5 ನೇ ಪ್ಯಾರದಲ್ಲಿ ಹೇಳಿರುವಂತೆ "ಅಲ್ಲಿ ಮಧ್ಯವನ್ನು ತೆಗೆದುಕೊಂಡು ಫೋನ್ ಪೇ ನಲ್ಲಿ ಹಣ ಸಂದಾಯ ಮಾಡಿರುವುದು" ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ನ್ಯಾಯಾಲಯದಲ್ಲಿ ಮೊಟ್ಟ ಮೊದಲಬಾರಿಗೆ ಹೇಳಿರುತ್ತೇನೆ ಹಾಗೂ ಬೇರೆ ಎಲ್ಲೂ ಹೇಳಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ಮಹಜರ್ ನಲ್ಲಿ ಎಲ್ಲಿಯೂ ಹೇಳಿಲ್ಲ ಎಂದರೆ ಸರಿ.

77. ಸಾಕ್ಷಿಗೆ ಮಹಜರ್ ನಲ್ಲಿ ಇರುವ screenshots ಗಳಲ್ಲಿ ಫೋನ್ ಪೇ ಮೂಲಕ ಹಣ ಸಂದಾಯ ಮಾಡುತ್ತಿರುವುದು ಕಾಣುತ್ತಿಲ್ಲ ಎಂದರೆ ಸರಿ.

**ಪ್ರಶ್ನೆ:** ಪೊಲೀಸರು ಆ ದಿನ ಒಟ್ಟು ಎಷ್ಟು screenshots ಗಳನ್ನು ತೆಗೆದುಕೊಂಡಿದ್ದರು?

**ಉತ್ತರ:** ನನಗೆ ಈಗ ಜ್ಞಾನಪಕ ಇಲ್ಲ.

**ಪ್ರಶ್ನೆ:** 10-15 ಇರಬಹುದಾ?

**ಉತ್ತರ:** ನನಗೆ ನೆನಪಿಲ್ಲ.

78. ಮಹಜರ್ ನ 1 ನೇ screenshot ನಲ್ಲಿ ಮುಖ ಯಾರದು ಕಾಣುತ್ತಿಲ್ಲ ಎಂದರೆ ಸರಿ. ಮಹಜರ್ ನ 2 ನೇ screenshot ನ ಬಲಗಡೆಯಿಂದ ಮೊದಲನೆಯ ವ್ಯಕ್ತಿಯ ಮುಖ ಕಾಣುತ್ತಿಲ್ಲ ಎಂದರೆ, ಸಾಕ್ಷಿ ಅರ್ಧ ಕಾಣುತ್ತಿದೆ ಎನ್ನುತ್ತಾರೆ. ಸದರಿ screenshot ನಲ್ಲಿ ಸದರಿ ವ್ಯಕ್ತಿ ಯಾರು ಎಂದು ಗುರುತು ಹಿಡಿಯಲು ಆಗುತ್ತಿಲ್ಲ ಎಂದರೆ ಸಾಕ್ಷಿ ನಾನು ಗುರುತು ಹಿಡಿಯುತ್ತೇನೆ ಎನ್ನುತ್ತಾರೆ. ಸದರಿ screenshot 5-6 ಜನರು ಇಲ್ಲ ಎಂದರೆ, ಸಾಕ್ಷಿ ಅದರಲ್ಲಿ ಇಬ್ಬರು ಇದ್ದಾರೆ ಎನ್ನುತ್ತಾರೆ. ಸದರಿ screenshot ನ ಮಧ್ಯದಲ್ಲಿ ಇರುವ ವ್ಯಕ್ತಿಯ ಮುಖ ಕಾಣುತ್ತಿಲ್ಲ ಎಂದರೆ, ಸಾಕ್ಷಿ ಅರ್ಧ ಕಾಣುತ್ತಿದೆ ಎನ್ನುತ್ತಾರೆ.

**ಪ್ರಶ್ನೆಃ** ಮೊದಲ screenshot ನಲ್ಲಿ ಮೂವರು ವ್ಯಕ್ತಿಗಳು ಇದ್ದು, ಅವರು ಯಾರು, ಯಾರು ಎಂದು, ಅವರ ಗುರುತಿಸುವ ಬಗ್ಗೆ ಸದರಿ ಮಹಜರ್ ನಲ್ಲಿ ಬರವಣಿಗೆ ಇಲ್ಲ ಎಂದರೆ?

**ಉತ್ತರಃ** ಬರವಣಿಗೆ ಇದೆ ಎನ್ನುತ್ತಾರೆ.

ಸದರಿ screenshot ನಲ್ಲಿ ತಿರಿಗಿರುವ ವ್ಯಕ್ತಿ, ಬಲಕ್ಕೆ ಇರುವ ವ್ಯಕ್ತಿ, ಆ ಕಡೆ ತಿರುಗಿರುವ ವ್ಯಕ್ತಿ ಯಾರು ಎಂದು ಬರಣೆಗೆ ಇಲ್ಲ ಎಂದರೆ ಸರಿ.

79. ಸದರಿ ಮಹಜರ್ ನಲ್ಲಿ ಅದರಲ್ಲಿ ಇರುವ ವ್ಯಕ್ತಿಗಳು ಧರಿಸಿರುವ ಬಟ್ಟೆಗಳ ಕಲರ್ ಬರವಣಿಗೆ ಇಲ್ಲ ಎಂದರೆ ಸರಿ. 2 ನೇ screenshot ನಲ್ಲಿ ಅರ್ಧ ಮುಖ ಕಾಣುವ ವ್ಯಕ್ತಿ ಯಾರು ಎಂದು ಮಹಜರ್ ನಲ್ಲಿ ಬರೆದಿಲ್ಲ ಎಂದರೆ, ಸಾಕ್ಷಿ ಮಹಜರ್ ನಲ್ಲಿ ಬರೆದಿದ್ದಾರೆ ಎನ್ನುತ್ತಾರೆ. ಅರ್ಧ ಮುಖ ಕಾಣುವ ವ್ಯಕ್ತಿ ಈತನೇ

ಎಂದು ಗುರುತಿಸಿ, ಅವರ ಹೆಸರನ್ನು ಮಹಜರ್ ನಲ್ಲಿ ಬರೆದಿಲ್ಲ ಎಂದರೆ ಸರಿ.

80. ಪೊಲೀಸರಿಗೆ ವಿಡಿಯೋದಲ್ಲಿ ಯಾರಾ ಮುಖಗಳು ಕಂಡುಬಂದಿಲ್ಲ, ಆ ಕಾರಣದಿಂದ screenshot ಗಳನ್ನು ತೆಗೆದು ಮಹಜರ್ ನಲ್ಲಿ ಅಳವಡಿಸಿಲ್ಲ ಎಂದರೆ, ಸಾಕ್ಷಿ ಮಹಜರ್ ನಲ್ಲಿ ಇರುವ screenshot ನಲ್ಲಿ ಇಲ್ಲ, ಆದರೆ ವಿಡಿಯೋದಲ್ಲಿ ಇದೆ ಎನ್ನುತ್ತಾರೆ.

**ಪ್ರಶ್ನೆ:** ನಿಮ್ಮ ಮುಖ್ಯವಿಚಾರಣೆಯ 15 ನೇ ಪೇಜ್ ಪ್ಯಾರ ನಂ.39 ರಲ್ಲಿ "1st clipping" ಎಂದು ಬರೆದಿದ್ದು, ನನ್ನ ಪ್ರಕಾರ ಅದರ ಅರ್ಥ "ತಿದ್ದುಪಡಿ ಮಾಡುವುದು" ಎಂದು. ನಿವೇನು ಹೇಳುವಿರಿ?

**ಉತ್ತರ:** ನನ್ನ ಮುಂದೆ screenshot ಗಳನ್ನು ತೆಗೆದುಕೊಂಡಿದ್ದು, ಮತ್ತು 1 ಮತ್ತು 2 ಕ್ಲಿಪ್ಪಿಂಗಳನ್ನು ತೆಗೆದುಕೊಂಡಿದ್ದು, ಅಂದರೆ ಒಳಗೆ ಬರುವ ಒಂದು ದೃಶ್ಯ ಮತ್ತು ಹೊರಗಡೆ ಬರುವ ಇನ್ನೊಂದು ದೃಶ್ಯ ತೆಗೆದುಕೊಂಡಿರುತ್ತಾರೆ.

81. ನನ್ನ ಮುಖ್ಯವಿಚಾರಣೆಯ ಪ್ಯಾರ 39 ರಲ್ಲಿ "ಅಲ್ಲಿ ಫಿಡ್ಜ್, ಕೌಂಟರ್ ಕಾಣುತ್ತಿದೆ. ಈಗ 11:21:51a.m ಗೆ ಜನ ಬಾರ್ ಒಳಗೆ ಬರುವುದು ಕಾಣುತ್ತಿದೆ. ಸಮಯ 11:22:20a.m ಗೆ ಜನ ಒಳಗೆ ಬರುವುದು ಕಾಣುತ್ತಿದೆ" ಎಂಬುವುದು ಮಹಜರ್ ನ screen shots ನಲ್ಲಿ ಕಾಣುತ್ತಿಲ್ಲ ಎಂದರೆ, ಸಾಕ್ಷಿ ಅದು ಸಿಸಿ ಟಿವಿ ಪೂಟೇಜ್ ನಲ್ಲಿ ಇದೆ ಎನ್ನುತ್ತಾರೆ.

82. ಯಾವ screen shot ಗಳನ್ನು ಮಹಜರ್ ನಲ್ಲಿ ಅಳವಡಿಸಬೇಕು

ಎಂದು ಪೊಲೀಸರು ತೀರ್ಮಾನಿಸಿದ್ದರು. ಇಲ್ಲಿರುವ 3 screen shot ಗಳನ್ನು ಬಿಟ್ಟು ಬೇರೆ screen shot ಗಳನ್ನು ಅಳವಡಿಸಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಬೇರೆ screen shot ಗಳನ್ನು ಅಳವಡಿಸಿಲ್ಲ ಎಂದು ನನಗೆ ಗೊತ್ತಿಲ್ಲ.

83. ನನ್ನ ಮುಖ್ಯವಿಚಾರಣೆಯ ಪ್ಯಾರ 39 ಮತ್ತು 40 ರಲ್ಲಿ ಸುಮಾರು ಸವಯಗಳನ್ನು ನಾನು ತಿಳಿಸಿರುತ್ತೇನೆ ಎಂದರೆ ಸರಿ. ಇಷ್ಟು ಸಮಯಗಳು ಮಹಜರ್ ನಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಂದಿರುವ ಸಮಯ ಹಾಗೂ ಹೋಗಿರುವ ಸಮಯ ಮಾತ್ರ Screenshot ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ಯಾರ 39 ಮತ್ತು 40 ಗಳಲ್ಲಿ ಹೇಳಿರುವ ಸಮಯಗಳು ಯಾರು, ಎಲ್ಲಿ, ಯಾವಾಗ ಸೆಟ್ ಮಾಡಿದ್ದರು ಎಂದು ಹೇಳಲು ಬರುತ್ತದೆಯ ಎಂದರೆ, ಸಾಕ್ಷಿ ಅಲ್ಲಿ ಪೊಲೀಸರು ಪೆನ್ ಡ್ರೈವ್ ನ್ನು ಪಡೆದುಕೊಂಡು ಲ್ಯಾಪ್ ಟಾಪ್ನಲ್ಲಿ ಹಾಕಿ ಎಲ್ಲಾ timings ಗಳನ್ನು ಅವರೇ ಚೆಕ್ ಮಾಡಿರುತ್ತಾರೆ ಎನ್ನುತ್ತಾರೆ. ಆ ಲ್ಯಾಪ್ ಟಾಪ್ ಯಾರದ್ದು ಎಂದರೆ ನನಗೆ ನೆನಪಿಲ್ಲ. ಆ ಲ್ಯಾಪ್ ಟಾಪ್ ಮಾಲೀಕರು ಯಾರು ಎಂದರೆ, ಸಾಕ್ಷಿ ಪೊಲೀಸರು ಆ ಲ್ಯಾಪ್ ಟಾಪ್ ತಂದಿದ್ದರು ಎನ್ನುತ್ತಾರೆ. ಪೊಲೀಸರು ತಂದ ಲ್ಯಾಪ್ ಟಾಪ್‌ನಲ್ಲಿ ಅವರೆ timings ಸೆಟ್ ಮಾಡಿದ್ದರು ಎಂದರೆ ಸರಿಯಲ್ಲ.

84. ಡಿವಿಆರ್ ನ್ನು ನೀವು ನೋಡಿಲ್ಲ ಎಂದರೆ, ಸಾಕ್ಷಿ ಆ ದಿನ ಡಿವಿಆರ್ ನನಗೆ ಪೊಲೀಸರು ತೋರಿಸಿದ್ದರು ಎನ್ನುತ್ತಾರೆ. ಡಿವಿಆರ್ ಎಲ್ಲಿ ಇತ್ತು ಎಂದರೆ, ಬಾರ್ ಒಳಗೆ ಇತ್ತು. ಬಾರ್ ಒಳಗೆ ಎಲ್ಲಿ ಇತ್ತು ಎಂದರೆ, ಕ್ಯಾಶಿಯರ್ ಕೌಂಟರ್ ಹತ್ತಿರ ಒಂದು ಮಾನಿಟರ್ ಪಕ್ಕದಲ್ಲಿ ಇತ್ತು. ಬಾರ್ ಕೌಂಟರ್ ಬಳಿ ಇದ್ದ ಮಾನಿಟರ್ ನಲ್ಲಿ ಯಾವುದೇ

ದೃಶ್ಯಾವಳಿಗಳನ್ನು ನೀವು ನೋಡಿಲ್ಲ ಎಂದರೆ ಸರಿ.

85. ಆ ದಿನ ಪೊಲೀಸರು ದುರ್ಗಾ ಬಾರ್ ಗೆ ಬಂದಿರಲೇ ಇಲ್ಲ ಎಂದರೆ, ಸರಿಯಲ್ಲ. ಪೊಲೀಸರ ಕೈಯಲ್ಲಿ ಕ್ಯಾಮರಾ ಇತ್ತ ಎಂದರೆ, ಸಾಕ್ಷಿ ಇಲ್ಲ ಎನ್ನುತ್ತಾರೆ. ಮಹಜರ್ ನ 4 ನೇ ಪೇಜ್ ಅಂದರೆ Pg.No.929 ನಲ್ಲಿ ಇರುವ screenshot ನಲ್ಲಿ ಕಾಣುವುದು ಬಾರ್ ಅಂಡ್ ರೆಸ್ಟೊರೆಂಟ್ ಅಲ್ಲ ಎಂದರೆ ಸರಿಯಲ್ಲ. ಸದರಿ screenshot ನಲ್ಲಿ ಬಾರು ಮತ್ತು ಡ್ರಿಂಕ್ಸ ಕಾಣುತ್ತಿಲ್ಲ ಎಂದರೆ ಸಾಕ್ಷಿ ಅದು ಬಾರಿನ ಹೊರಗಡೆ ಇರುವ screenshot ಎನ್ನುತ್ತಾರೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಹೊರಗಡೆ ಇದೇ ರೀತಿ ಕಾಣುತ್ತದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 1 ಮತ್ತು 12 ನೇ ಆರೋಪಿಗಳ ಪರ ವಕೀಲರು ಮುಂದುವರೆದ ಪಾಟಿಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಅವರ ಕೊರಿಕೆ ಮೆರೆಗೆ ಮುಂದುವರೆದ ಪಾಟಿಸವಾಲು ಮುಂದೂಡಲಾಯಿತು).**

**Note:** On 24.06.2026, the evidence of PW16 was completed at 5.30pm. Thereafter, the court was busy in taking up other transfer matters and regular matters, hence corrections could not completed upto 6.00p.m. Therefore, after completion of corrections, printout of deposition of PW16 recorded on 24.06.2026 was taken on 25.06.2026. Thereafter, the signature of the PW16 on the deposition dtd. 24.06.2026 taken today.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,
ಬೆಂಗಳೂರು.**

**ಪಾಟಿಸವಾಲು 3 ನೇ ಆರೋಪಿ ಪರ ಶ್ರೀ. ಆರ್.ಆರ್.ವಕೀಲರಿಂದಃ**

ಶ್ರೀ. ಆರ್.ಆರ್. ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಪಾಟಿಸವಾಲು 14 ನೇ ಆರೋಪಿ ಪರ ಶ್ರೀ. ಆರ್.ಆರ್.ವಕೀಲರಿಂದಃ**

ಶ್ರೀ. ಆರ್.ಆರ್. ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.